ಓ ಎಸ್ ನಂ577/2014

ಡಿ. ಡಬ್ಲ್ಯೂ : 1

ದಿಃ 13.06.2025 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ಎಲ್ ವಕೀಲರಿಂದ

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ತಾತನ ಹೆಸರು ರೇವಯ್ಯ ಇರುತ್ತದೆ. ರೇವಯ್ಯನವರಿಗೆ ಇಬ್ಬರು ಮಕ್ಕಳಿದ್ದರು. ಅವರೆಂದರೆ ರಾಮಲಿಂಗಯ್ಯ ಮತ್ತು ಜುಂಜಯ್ಯ ಇರುತ್ತಾರೆ. ದಾವಾ ಸ್ವತ್ತು ಮೂಲತಃ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ, ರಾಮಲಿಂಗಯ್ಯ ಮತ್ತು ಜುಂಜಯ್ಯ ನವರಿಗೆ ವಿಭಾಗದ ಮೂಲಕ ಪತ್ರಗಳು ಬಂದಿರುತ್ತವೆ. ಸದರಿ ವಿಭಾಗಪತ್ರ 1975 ರಲ್ಲಿ ಆಗಿರುತ್ತವೆ. ಸದರಿ ವಿಭಾಗಪತ್ರದಲ್ಲಿ ರಾಮಲಿಂಗಯ್ಯ ನವರಿಗೆ ಸ.ನಂ. 110/12, 126/4 ಮತ್ತು ಸ.ನಂ. 126/16 ರಲ್ಲಿ ಒಟ್ಟು 2 ವರೆ ಎಕರೆ ಜಮೀನು ಬಂದಿದ್ದು, ಹಾಗೆಯೇ ಜುಂಜಯ್ಯ ನವರಿಗೆ ಸ.ನಂ. 110/12, ಸ.ನಂ. 126/4 ಮತ್ತು ಸ.ನಂ. 126/16 ರಲ್ಲಿ ಒಟ್ಟು 1 ಕಾಲು ಎಕರೆ ಜಮೀನು ಬಂದಿರುತ್ತದೆ. ಜುಂಜಯ್ಯ ನವರು ನನಗೆ ಚಿಕ್ಕಪ್ಪನಾಗಬೇಕು.

ನಾವು ಸ್ವಾಧೀನದಲ್ಲಿ ದಾವಾ ಸ್ವತ್ತಿನ ಸ.ನಂ. ನಲ್ಲಿ ಇರುತ್ತೇವೆ ಎಂದು ತೋರಿಸಲು ಪಹಣಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇವೆ. 1985 ರಲ್ಲಿ ಆಗಿರುವ ಕ್ರಯಪತ್ರ ನಿ ಡಿ 6 ಯಾರ ಹೆಸರಿನಲ್ಲಿರುತ್ತದೆ ಎಂದರೆ ಜುಂಜಯ್ಯ ನವರ ಕಡೆಯಿಂದ ರಾಮಲಿಂಗಯ್ಯ ನವರಿಗೆ ಆಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಜುಂಜಯ್ಯ ನವರಿಗೆ 1975 ರಲ್ಲಿ ಆಗಿರುವ ವಿಭಾಗಪತ್ರದಲ್ಲಿ ಬಂದಿರುವ ಸ್ವತ್ತನ್ನು ರಾಮಲಿಂಗಯ್ಯ ನವರು 1985 ರಲ್ಲಿ ಖರೀದಿ ಮಾಡಿರುತ್ತಾರೆ. ಕ್ರಯದ ಮೂಲಕ ಪಡೆದಿರುವ ಸ.ನಂ. ಗಳಲ್ಲಿ ನಾವು ಸ್ವಾಧೀನದಲ್ಲಿರುತ್ತೇವೆ ಎಂದು ತೋರಿಸಲು ನಾನು ಪಹಣಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇವೆ.

ರಾಮಲಿಂಗಯ್ಯ ನವರಿಗೆ 4 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇದ್ದರು. 1975 ರ ವಿಭಾಗಪತ್ರ ಮತ್ತು 1985 ರ ಕ್ರಯಪತ್ರದ ಮೂಲಕ ಬಂದಿರುವ ಸ್ವತ್ತಿನಲ್ಲಿ ಪ್ರತಿವಾದಿ 6 ರವರಿಗೆ ಹಕ್ಕು ಇರುತ್ತದೆ ಎಂದರೆ ಸರಿ. ಪ್ರತಿವಾದಿ 6 ರವರಿಗೆ ಸಮಾನವಾದ ಭಾಗಾಂಶ ಕೊಡಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ.

ಮರುವಿಚಾರಣೆ ಃ ಇಲ್ಲ

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.

ಓ ಎಸ್ ನಂ577/2014

ಡಿ. ಡಬ್ಲ್ಯೂ : 2

ದಿಃ 13.06.2025 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ಎಲ್ ವಕೀಲರಿಂದ :

ರಾಮಲಿಂಗಯ್ಯ ನವರಿಗೆ ದಾವಾ ಸ್ವತ್ತು ಅವರ ಅಣ್ಣ ತಮ್ಮಂದಿರ ವಿಭಾಗದಲ್ಲಿ ಬಂದಿರುತ್ತದೆ. ಸದರಿ ವಿಭಾಗ ಮಾಡಿಕೊಂಡಿರುವ ಸ್ವತ್ತುಗಳಲ್ಲಿ ರಾಮಲಿಂಗಯ್ಯ ನವರು ಸ್ವಾಧೀನದಲ್ಲಿರುತ್ತಾರೆ. 1985 ರ ಕ್ರಯಪತ್ರದ ಮುಖಾಂತರ ಬಂದಿರುವ ಸ್ವತ್ತುಗಳಲ್ಲೂ ಕೂಡ ರಾಮಲಿಂಗಯ್ಯ ಮತ್ತು ಅವರ ಮಕ್ಕಳು ಸ್ವಾಧೀನದಲ್ಲಿರುತ್ತಾರೆ. 1985 ರ ಕ್ರಯಪತ್ರದಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ.

ಮರುವಿಚಾರಣೆ : ಇಲ್ಲ

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.